**PRAJAVANI**

Date: Jan 22, 2016 Page: 03

Edition:Mysore Language: Kannada

ಅಮೆರಿಕದ ಬಫೆಲೊ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ರಡಾಲ್ಫ್ ಲೀ ಕಾರ್ಟರ್ ಅಭಿಮತ

# ಸಂಖ್ಯಾಶಾಸ್ತ್ರ: ಸಂಶೋಧನೆಗೆ ಅಪರಿಮಿತ ಅವಕಾಶ

ಪ್ರಜಾವಾಣಿ ವಾರ್ತೆ

ಮೈಸೂರು: ಬೃಹತ್ ದತ್ತಾಂಶ ಕ್ಷೇತ್ರದಲ್ಲಿನ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಸಂಖ್ಯಾಶಾಸ್ತ್ರದಲ್ಲಿ ಸಂಶೋಧನೆಗೆ ಅಪರಿಮಿತ ಅವಕಾಶಗಳಿವೆ ಎಂದು ಅಮೆರಿಕದ ಬಫೆಲೊ ವಿಶ್ವವಿದ್ಯಾಲಯದ ಪ್ರೊ.ರಡಾಲ್ಫ್ ಲೀ ಕಾರ್ಟರ್ ಹೇಳಿದರು.

ನಗರದ ಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣೆ ಅಭಿವೃದ್ಧಿ ಸಂಸ್ಥೆಯಲ್ಲಿ (ಎಸ್‌ಡಿಎಂಐಎಂಡಿ) ಗುರುವಾರ ಏರ್ಪಡಿಸಿದ್ದ 'ನಿರ್ವಹಣೆ ಮತ್ತು ಸಂಶೋಧನೆ ಕಾರ್ಯನಿರ್ವಹಣೆ' ಅಂತರರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಬೃಹತ್ ದತ್ತಾಂಶ ಕ್ಷೇತ್ರದಲ್ಲಿನ ಸಮಸ್ಯೆಗಳಿಗೆ ಸಂಖ್ಯಾಶಾಸ್ತ್ರದ ಮೂಲಕ ಪರಿಹಾರಗಳನ್ನು ಕಂಡುಕೊಳ್ಳಲು ಸಾಧ್ಯ ಇದೆ. ಈ ಕ್ಷೇತ್ರದ ವಿಶ್ಲೇಷಣೆಗೆ ಹೊಸ ವಿಧಾನಗಳು, ಆಯಾಮಗಳನ್ನು ಸಂಖ್ಯಾಶಾಸ್ತ್ರಜ್ಞರು ಸೂಚಿಸಬೇಕು. ಅಗಾಧ ಪ್ರಮಾಣದ, ಚೌಕಟ್ಟುರಹಿತ ದತ್ತಾಂಶಗಳ ವಿಶ್ಲೇಷಣೆಗೆ ಹೊಸವಿಧಾನಗಳನ್ನು ರೂಪಿಸಬೇಕಿದೆ ಎಂದರು.



ಮೈಸೂರಿನ ಎಸ್‌ಡಿಎಂಐಎಂಡಿನಲ್ಲಿ ಗುರುವಾರ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ರಾಜೀವ್ ರಾಜಪಾಲ್ ಮಾತನಾಡಿದರು (ಎಡಚಿತ್ರ). ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಶಿಬಿರಾರ್ಥಿಗಳು

ಬೃಹತ್ ದತ್ತಾಂಶ ಕ್ಷೇತ್ರದ ತಾಂತ್ರಿಕ ಸಮಸ್ಯೆಗಳ ನಿವಾರಣೆ ನಿಟ್ಟಿನಲ್ಲಿ ಗಣಕ ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳು ಪ್ರಗತಿ ಸಾಧಿಸಿದ್ದಾರೆ. ಬಹಳಷ್ಟು ಕಂಪೆನಿಗಳು ಗಣಕ ತಂತ್ರಾಂಶಗಳನ್ನು ಬಳಸಿಕೊಂಡು ದತ್ತಾಂಶವನ್ನು ವಿಶ್ವದಾದ್ಯಂತ ವ್ಯವಸ್ಥಿತವಾಗಿ ನಿರ್ವಹಿಸುತ್ತಿವೆ. ದತ್ತಾಂಶ ಸಂಗ್ರಹ, ಗುಣಮಟ್ಟ, ವಿಶ್ಲೇಷಣೆಗೆ ಸಂಬಂಧಿಸಿದಂತೆ ಕೆಲವಾರು ಸವಾಲುಗಳು ಇವೆ. ಈ ನಿಟ್ಟಿನಲ್ಲಿ ಸಂಖ್ಯಾಶಾಸ್ತ್ರಜ್ಞರು ಚಿತ್ತಹರಿಸಬೇಕು. ಬೃಹತ್ ದತ್ತಾಂಶ ನಿರ್ವಹಣೆಗೆ ಸಂಬಂಧಿಸಿದಂತೆ ಸಂಖ್ಯಾಶಾಸ್ತ್ರ ಅಧ್ಯಯನದಲ್ಲಿ ಹೊಸ ಕೋರ್ಸ್‌ಗಳನ್ನು ರೂಪಿಸಬೇಕು ಎಂದು ಸಲಹೆ ನೀಡಿದರು.

ತ್ರಿವೇಣಿ ಎಂಜಿನಿಯರಿಂಗ್- ಇಂಡಸ್ಟ್ರೀಸ್‌ನ ಕಾರ್ಯನಿರ್ವಾಹಕ ಅಧಿಕಾರಿ ರಾಜೀವ್ ರಾಜಪಾಲ್ ಮಾತನಾಡಿ, ಉದ್ಯಮದಲ್ಲಿ ಯಶಸ್ಸು ಸಾಧಿಸುವ ನಿಟ್ಟಿನಲ್ಲಿ ಕಾರ್ಯಕ್ಷಮತೆ ಮುನ್ನೋಟ ಮತ್ತು ಮೌಲ್ಯಗಳು ಪ್ರಮುಖ ಪಾತ್ರವಹಿಸುತ್ತವೆ ಎಂದು ಹೇಳಿದರು.

**ಮುಖ್ಯಾಂಶಗಳು**

- ದತ್ತಾಂಶ ಸಂಗ್ರಹ, ವಿಶ್ಲೇಷಣೆ ಸವಾಲುಗಳು
- ಬೃಹತ್ ದತ್ತಾಂಶ ಕ್ಷೇತ್ರದ ಸಮಸ್ಯೆಗಳಿಗೆ ಸಂಖ್ಯಾಶಾಸ್ತ್ರದ ಮೂಲಕ ಪರಿಹಾರ
- ಸಂಖ್ಯಾಶಾಸ್ತ್ರ ಕ್ಷೇತ್ರದಲ್ಲಿ ಹೊಸ ಕೋರ್ಸ್ ಆರಂಭಿಸಲು ಸಲಹೆ

ಈ ಮೂರು ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಿಂದ ಸಂಸ್ಥೆಯು ಯಶಸ್ಸಿನ ಹಾದಿಯಲ್ಲಿ ಕೊಂಡೊಯ್ಯಬಹುದು. ನಾಯಕತ್ವವನ್ನು ಕಾಪಾಡಿಕೊಳ್ಳುವುದು, ಉತ್ಕೃಷ್ಟ ಗುಣಮಟ್ಟ, ಸೇವೆ ಮತ್ತು ದರಗಳನ್ನು ಒದಗಿಸುವುದು ಕಾರ್ಯಕ್ಷಮತೆಯ ಲಕ್ಷಣಗಳಾಗಿವೆ. ಉತ್ಪನ್ನದ ತಂತ್ರಜ್ಞಾನವನ್ನು ನಿರಂತರವಾಗಿ ಅಪ್‌ಗ್ರೇಡ್ ಮಾಡುವುದು, ಉತ್ಪನ್ನದ ಸುಲಭ ಲಭ್ಯತೆ ಮತ್ತು ರಿಪ್ಲೇಸಮೆಂಟ್‌ಗೆ ಅವಕಾಶಗಳು ಉತ್ಪನ್ನಕ್ಕೆ ಉಜ್ವಲ ಭವಿಷ್ಯವನ್ನು ಒದಗಿಸುತ್ತವೆ. ಕ್ರಿಯಾಶೀಲತೆ ಮತ್ತು ಸಂಘಟಿತ ಕಾರ್ಯನಿರ್ವಹಣೆ, ಉದ್ಯೋಗಿಗಳಿಗೆ ಸಮಾನ ಅವಕಾಶ ಮೌಲ್ಯಗಳು ಇರಬೇಕು ಎಂದು ವಿವರಿಸಿದರು.

ಸ್ಪರ್ಧಾ ಜಗತ್ತಿನಲ್ಲಿ ಬೇಡಿಕೆ ನಿರಂತರವಾಗಿ ಬದಲಾಗುತ್ತಿರುತ್ತದೆ. ನಿರೀಕ್ಷಿತ ಗುರಿ ಸಾಧನೆ ಎಡರು-ತೊಡರುಗಳು ಸದಾ ಎದುರಾಗುತ್ತಿರುತ್ತವೆ. ಹೊಸತನ ಮತ್ತು ಬದಲಾವಣೆಗಳಿಗೆ ನಿರಂತವಾಗಿ ಒಗ್ಗಿಕೊಳ್ಳುತ್ತಾ ಸವಾಲುಗಳನ್ನು ಸಮರ್ಥವಾಗಿ ಎದುರಿಸಬೇಕು ಎಂದು ಕಿವಿಮಾತು ಹೇಳಿದರು.

ಎಸ್‌ಡಿಎಂಐಎಂಡಿ ನಿರ್ದೇಶಕ ಡಾ.ಎನ್.ಆರ್. ಪರಶುರಾಮನ್, ಡಾ.ಜಗದೀಶ್ ರಾಜ್ ಇದ್ದರು.